ಓ.ಎಸ್. 73/2009

ಡಿ.ಡಬ್ಲ್ಯೂ-3

ದಿನಾಂಕಃ 19-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು 3 ರಿಂದ 5 ನೇ ಪ್ರತಿವಾದಿ ಪರ ಶ್ರೀ ಬಿ.ಆರ್.ಎಲ್. ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನನ್ನನ್ನು ಸಣ್ಣಸ್ವಾಮಿ, ಸಣ್ಣಸ್ವಾಮಿ ಟಿ.ಆರ್. ಮತ್ತು ಪುಟ್ಟಸಾಮಿ ಎಂಬ ಹೆಸರಿನಿಂದ ಕರೆಯುತ್ತಾರೆಂದರೆ ಸಾಕ್ಷಿಯು ಸಣ್ಣಸ್ವಾಮಿ, ಸಣ್ಣಸ್ವಾಮಿ ಟಿ.ಆರ್. ಎಂದು ಕರೆಯುತ್ತಾರೆಂದು ನುಡಿಯುತ್ತಾರೆ. ಈ ದಾವೆಯಲ್ಲಿ ಅರ್ಜಿ ಹಾಕುವ ಮುಖಾಂತರ ಸೇರಿದ್ದೇವೆ. ಸದರಿ ಅರ್ಜಿಯಲ್ಲಿ ನನ್ನ ತಂದೆಯ ಹಿಸ್ಸೆ ಬರಬೇಕೆಂದು ಕೋರಿದ್ದೇವೆ. 6 ರಿಂದ 11 ನೇ ಪ್ರತಿವಾದಿ ನಿಮಗೆ ಏನು ಆಗಬೇಕೆಂದರೆ ಸಾಕ್ಷಿಯು 6 ನೇ ಪ್ರತಿವಾದಿ ನನ್ನ ತಾಯಿ ಅಂದರೆ ರಾಮಯ್ಯನವರ 2 ನೇ ಹೆಂಡತಿ. 8 ರಿಂದ 11 ನೇ ಪ್ರತಿವಾದಿ ನನ್ನ ಸಹೋದರ-ಸಹೋದರಿಯವರು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. 3 ರಿಂದ 5 ನೇ ಪ್ರತಿವಾದಿಗಳು ನಿಮಗೆ ಏನು ಆಗಬೇಕೆಂದರೆ ಸಾಕ್ಷಿಯು ನಮಗೆ ಯಾವುದೇ ಸಂಬಂಧ ಆಗುವುದಿಲ್ಲ, ಮುಂದುವರೆದು ನಮ್ಮ ದೇವರ ವಠಾರಕ್ಕೆ ಸೇರಿದವರು ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ನಿಮ್ಮ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ.

ಲೇಟ್ ಎಳವಯ್ಯ ನನ್ನ ತಾತ. ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಮುಂದುವರೆದು ಮೂಲತಃ ಎಳವಯ್ಯನವರಿಗೆ ಸೇರಿದ ಆಸ್ತಿ ಎಂದು ನುಡಿಯುತ್ತಾರೆ. ಎಳವಯ್ಯ ರವರ ತಂದೆ ಹೆಸರು ಬಸವಯ್ಯ. ಸದರಿ ಬಗ್ಗೆ ನ್ಯಾಯಾಲಯಕ್ಕೆ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. 3 ರಿಂದ 5 ನೇ ಪ್ರತಿವಾದಿಗಳು ನಮ್ಮ ತಾತ ಎಳವಯ್ಯನವರ ದೊಡ್ಡ ಅಣ್ಣನಾದ ಮೂಗಯ್ಯನ ಮಗ ರಾಮಯ್ಯನವರ ಮಕ್ಕಳು ಎಂದರೆ ಸರಿಯಲ್ಲ. ಐಟಂ ನಂ.1 ಕೆಂಚ ಬಿನ್ ಹೆಬ್ಬೂರ್ ಎಂಬುವವರ ಪಿತ್ರಾರ್ಜಿತ ಆಸ್ತಿ ಎಂದು ನಿಡಿ-2 ರಲ್ಲಿ

ನಮೂದಾಗಿರುತ್ತದೆಂದರೆ ಸರಿ. ಮುಂದುವರೆದು ಸದರಿಯವರಿಗೆ ಒಬ್ಬ ಮಗಳಿದ್ದು, ಅವಳು ಜಮೀನನ್ನು ಉಳುಮೆ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಐಟಂ ನಂ.1 ದಾವಾ ಸ್ವತ್ತುಗಳು ನಮ್ಮ ತಂದೆಗೆ ನಮ್ಮ ತಾತ ಎಳವಯ್ಯ ನವರಿಂದ ಬಂದಿರುತ್ತದೆ. ಮುಂದುವರೆದು ನಮ್ಮ ತಾತ ಎಳವಯ್ಯ ನವರಿಗೆ ಸ್ವಯಾರ್ಜಿತವಾಗಿ ಸಂಬಂಧಿಸಿರುತ್ತದೆ. ಸದರಿ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ನೀಡಿರುವುದಿಲ್ಲ. ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ದಾಖಲೆ ನೀಡಿರುತ್ತೇನೆಂದು ನುಡಿಯುತ್ತಾರೆ. ನಿಪಿ-3 ರಲ್ಲಿ ಕಲಂ 9 ರಲ್ಲಿ ಕೆಂಚ್ ಬಿನ್ ಹೆಬ್ಬೂರ್, ಖಾತೆ ಸಂ.35, ಪಿತ್ರಾರ್ಜಿತ ಎಂದು ನಮೂದು ಇರುತ್ತದೆಂದರೆ ಸರಿ. ನಮ್ಮ ಕುಟುಂಬದಲ್ಲಿ ರಾಮಯ್ಯ ಎನ್ನುವವರು ನಮ್ಮ ತಂದೆಯೊಬ್ಬರೇ ಇರುತ್ತಾರೆ, ಅವರನ್ನು ಹೊರತುಪಡಿಸಿ ಯಾರು ಇರುವುದಿಲ್ಲ. ನಮ್ಮ ತಾತ ಎಳವಯ್ಯ ನವರ ತಂದೆ ಹೆಸರು ರಾಮಯ್ಯ ಬಿನ್ ಲೇಟ್ ಹೆಬ್ಬೂರ್ ಎಂದರೆ ಸರಿಯಲ್ಲ. ಸಾಕ್ಷಿ ಬಸವಯ್ಯ ನನ್ನ ತಂದೆ ಎಂದು ತಿಳಿಸಿರುತ್ತಾರೆ. ಚಿಕ್ಕಮೂಗಯ್ಯ, ಎಳವಯ್ಯನವರ ತಮ್ಮ ನವರಿಗೆ ಎಷ್ಟು ಜನ ಮಕ್ಕಳು ಇದ್ದರು ಎಂದರೆ ಸಾಕ್ಷಿಯು ಅವರಿಗೆ ತಮ್ಮ ಇರಲಿಲ್ಲ ಎಂದು ನುಡಿಯುತ್ತಾರೆ. ನಿಡಿ-2 ರಲ್ಲಿ ಐಟಂ ನಂ.1, ಸ್ವತ್ತಿಗೆ ಕೆಂಚ್ ಬಿನ್ ಹೆಬ್ಬೂರ್, ಪಿತ್ರಾರ್ಜಿತ ಎಂದು ಬರೆದಿರುತ್ತದೆಂದರೆ ಸಾಕ್ಷಿಯು ಅದರಲ್ಲಿ ಬರೆದಿರುತ್ತದೆ, ಆದರೆ ಅದು ಹೇಗೆ ನಮೂದಾಗಿದೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ದಾಖಲಾತಿಯಲ್ಲಿ ಎಳವಯ್ಯ ಪಿತ್ರಾರ್ಜಿತ ಎಂದು ಸಹ ನಮೂದು ಇರುತ್ತದೆಂದರೆ ಸಾಕ್ಷಿಯು ನಮೂದು ಇರುತ್ತದೆ, ಆದರೆ ಅದು ಹೇಗೆ ನಮೂದಾಗಿದೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-15 ಸುಳ್ಳು ದಾಖಲಾತಿಯಾ ಎಂದರೆ ಸರಿ. ದಾವಾ ಸ್ವತ್ತುಗಳನ್ನು ವಾದಿ ಮತ್ತು ಪ್ರತಿವಾದಿಗಳಿಗೆ ನ್ಯಾಯಾಲಯ ಸಮಾನವಾದ ಭಾಗಾಶಃ ನೀಡಿದರೆ ನಿಮಗೆ ಏನು ತೊಂದರೆಯಾಗುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಸಂಬಂಧ ಕುಟುಂಬಸ್ಥರಿಗೆ ಭಾಗಾಶ್ಲವಾರದರೆ ಏನು ತೊಂದರೆ ಆಗುವುದಿಲ್ಲ ಎಂದು ನುಡಿಯುತ್ತಾರೆ. 3 ರಿಂದ 5 ನೇ ಪ್ರತಿವಾದಿಯವರು ಮೂಗಯ್ಯನವರ ತಳಿಯಾಗಿದ್ದು, ನಮ್ಮ ಕುಟುಂಬಸ್ಥರೇ ಅವರಿಗೂ ಭಾಗ ನೀಡಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಐಟಂ ನಂ.1 ದಾವಾ ಆಸ್ತಿ ಕೆಂಚ್ ಬಿನ್ ಹೆಬ್ಬೂರ್ ಅವರ ಪಿತ್ರಾರ್ಜಿತ ಆಸ್ತಿ ಎಂದು ಅವರ ದಾಖಲಾತಿಯಲ್ಲಿ ನಮೂದು ಇದ್ದು, 3 ರಿಂದ 5 ನೇ ಪ್ರತಿವಾದಿಗಳಿಗೂ ಅದರಲ್ಲಿ ಭಾಗ

ಇದ್ದು, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.